## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2018-19ನೇ ಸಾಲಿನ NSP 2.0 ಅಡಿಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದಡಿ ಪರಿಶೀಲಿಸದೇ ಬಾಕಿ ಇರುವ ಅರ್ಜಿಗಳಿಗೆ ವಿದ್ಯಾರ್ಥಿವೇತನ ಮಂಜೂರಾತಿ ನೀಡಲು ಅನುಮತಿ ನೀಡುವ ಕುರಿತು.

**ಉಲ್ಲೇಖ:** ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಪವಕನಿ:ಇಡಿ-04:ಸಿಆರ್-11/2019-20, ದಿನಾಂಕ:18.12.2019.

**************

**ಪ್ರಸ್ತಾವನೆ:**

ಮೇಲೆ ಓದಲಾದ ಉಲ್ಲೇಖಿತ ಪತ್ರದಲ್ಲಿ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರು 2018-19ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ NSP 2.0 ಅಡಿಯಲ್ಲಿ ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ಆನ್ ಲೈನ್ ಮೂಲಕ ಅಹ್ವಾನಿಸಲಾಗಿದ್ದ ಒಟ್ಟಾರೆ 121317 ಅರ್ಜಿಗಳ ಪೈಕಿ 111614 ಅರ್ಜಿಗಳು ಮಾತ್ರ ಅಂತಿಮವಾಗಿ ಪರಿಶೀಲನೆ ಕೈಗೊಂಡು 8630 ಅರ್ಜಿಗಳನ್ನು ಪರಿಶೀಲನೆಗೆ ಬಾಕಿ ಉಳಿದಿರುವುದಾಗಿ ತಿಳಿಸಲಾಗಿದೆ. ಸದರಿ ಬಾಕಿ ಇರುವ ಅರ್ಜಿಗಳನ್ನು ಪರಿಶೀಲನೆಗೊಳಿಸುವ ಕುರಿತು ಕೇಂದ್ರ ಸರ್ಕಾರವನ್ನು ಕೆಲವು ಅಂಶಗಳಿಗೆ ಮಾಹಿತಿ ಒದಗಿಸಲು ಕೋರಿದ್ದು, ಕೋರಲಾಗಿರುವ ಅಂಶಗಳಿಗೆ ಈ ಇಲಾಖೆಯಿಂದ ಮಾಹಿತಿ ಒದಗಿಸಲಾಗಿ ನಂತರ ಕೇಂದ್ರ ಸರ್ಕಾರವು 2018-19ನೇ ಸಾಲಿನ ಆನ್ ಲೈನ್ ಪ್ರಕ್ರಿಯೆ ಪೂರ್ಣಗೊಂಡಿರುವುದರಿಂದ ಪ್ರಸ್ತುತ ಪರಿಶೀಲನೆಗೆ ಅವಕಾಶ ಸಾಧ್ಯವಿಲ್ಲವೆಂದು ತಿಳಿಸಿ manual verification ಮಾಡಲು ಸೂಚಿಸಿರುವುದಾಗಿ ತಿಳಿಸಿರುವ ಹಿನ್ನಲೆಯಲ್ಲಿ manual verification ಮೂಲಕ ಕೆಲವು ಷರತ್ತುಗಳಿಗೆ ಒಳಪಡಿಸಿ ಪ್ರಸ್ತುತ ಅಗತ್ಯವಿರುವ ಅನುದಾನ ರೂ.1058.18 ಲಕ್ಷಗಳನ್ನು ಜಿಲ್ಲಾವಲಯ ಲೆಕ್ಕ ಶೀರ್ಷಿಕೆಗಳಾದ 2225-00-102-0-31 ಹಾಗೂ 2225-00-102-0-07 ರಡಿ ಲಭ್ಯವಿರುವ ಅನುದಾನ ರೂ.16400.92 ಲಕ್ಷಗಳಲ್ಲಿ ವೆಚ್ಚ ಭರಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 10 ಎಸ್ ಟಿ ಪಿ 2020, ದಿನಾಂಕ:19.02.2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2018-19ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ಆನ್ ಲೈನ್ ಪ್ರಕ್ರಿಯೆ ಪೂರ್ಣಗೊಂಡಿರುವುದರಿಂದ ಪ್ರಸ್ತುತ ಪರಿಶೀಲನೆಗೆ ಅವಕಾಶ ಸಾಧ್ಯವಿಲ್ಲವೆಂದು ತಿಳಿಸಿ manual verification ಮಾಡಲು ಕೇಂದ್ರ ಸರ್ಕಾರವು ಸೂಚಿಸಿರುವ ಹಿನ್ನಲೆಯಲ್ಲಿ manual verification ಮೂಲಕ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ, ಬಾಕಿ ಇರುವ ಅರ್ಜಿಗಳಿಗೆ ತಗಲುವ ರೂ.1058.18 ಲಕ್ಷಗಳ ವೆಚ್ಚವನ್ನು 2019-20ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ

ಲೆಕ್ಕ ಶೀರ್ಷಿಕೆ:2225-00-102-0-31 ಅಥವಾ 2225-00-102-0-07 ರಡಿ ಲಭ್ಯವಿರುವ ರೂ.16,400.92 ಲಕ್ಷಗಳ ಅನುದಾನದಲ್ಲಿ ವೆಚ್ಚ ಭರಿಸಲು ಅನುಮತಿ ನೀಡಿ ಆದೇಶಿಸಿದ.

1. 2018-19 ನೇ ಸಾಲಿಗೆ NSP 2.0 ಮೂಲಕ ಅರ್ಜಿಗಳನ್ನು ಸಲ್ಲಿಸಿ , Permanent Registration Number ಹೊಂದಿರುವಂತಹ ಅರ್ಜಿಗಳು ಕಾಲೇಜು ಲಾಗಿನ್, ಜಿಲ್ಲಾ ಮಟ್ಟದ ಲಾಗಿನ್ ಮತ್ತು ರಾಜ್ಯ ಮಟ್ಟದ ಲಾಗಿನ್‌ನಲ್ಲಿ ಪರಿಶೀಲಿಸದೇ ಬಾಕಿ ಉಳಿದಿದ್ದಲ್ಲಿ ಸಂಬಂಧಿಸಿದ ವಿದ್ಯಾಸಂಸ್ಥೆಯ ಮುಖ್ಯಸ್ಥರಿಂದ ದೃಢೀಕೃತ ದಾಖಲಾತಿಗಳನ್ನು ಪಡೆದು ಪರಿಶೀಲಿಸಿಕೊಂಡು, ದಾಖಲಾತಿಗಳು ಸಮರ್ಪಕವಾಗಿರುವುದು ಕಂಡುಬಂದಲ್ಲಿ ವಿದ್ಯಾರ್ಥಿ ವೇತನವನ್ನು ನಿಯಮಾನುಸಾರ ತಾಲ್ಲೂಕು ಮಟ್ಟದ ಅಧಿಕಾರಿಗಳು ಮಂಜೂರಾತಿ ಮಾಡತಕ್ಕದ್ದು.
2. ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸುವಾಗ Post Matric Scholarship for ST Students – Karnataka ಸ್ಕೀಮ್ ಗೆ ಬದಲಾಗಿ Center Sector Scheme ಅಥವಾ ಬೇರೆ ಸ್ಕೀಮ್ ರಡಿಯಲ್ಲಿ ಅರ್ಜಿ ಸಲ್ಲಿಸಿದ್ದರೆ ಬದಲಾದ ಸ್ಕೀಮ್ ಅಡಿಯಲ್ಲಿ ವಿದ್ಯಾರ್ಥಿಯು ವಿದ್ಯಾರ್ಥಿವೇತನದ ಮೊತ್ತವನ್ನು ಸಂಬಂಧಿಸಿದ ಇಲಾಖೆಯಿಂದ ಪಡೆದಿರುವುದಿಲ್ಲದಿರುವುದರ ಬಗ್ಗೆ ಮತ್ತು ಒಂದು ವೇಳೆ ವಿದ್ಯಾರ್ಥಿವೇತನದ ಮೊತ್ತವನ್ನು ಈಗಾಗಲೇ ಸಂಬಂದಿಸಿದ ಇಲಾಖೆಯಿಂದ ಪಡೆದುಕೊಂಡಿದ್ದರೆ ವಿದ್ಯಾರ್ಥಿಯು ಸಂಬಂಧಿಸಿದ ಇಲಾಖೆಗೆ ಮರುಪಾವತಿ ಮಾಡಿರುವುದನ್ನು ದೃಢಪಡಿಸಿಕೊಂಡ ನಂತರ ಸಂಬಂಧಿಸಿದ ವಿದ್ಯಾಸಂಸ್ಥೆಯ ಮುಖ್ಯಸ್ಥರಿಂದ ದೃಢೀಕೃತ ದಾಖಲಾತಿಗಳನ್ನು ಪಡೆದು ಪರಿಶೀಲಿಸಿಕೊಂಡು ವಿದ್ಯಾರ್ಥಿವೇತನವನ್ನು ನಿಯಮಾನುಸಾರ ಮಂಜೂರಾತಿ ಮಾಡತಕ್ಕದ್ದು.
3. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ Tution Fees, Admission Fees, Maintenance Fees ಹಾಗೂ ರಾಜ್ಯ ಸರ್ಕಾರ ನಿಗಧಿಪಡಿಸುವ ಶುಲ್ಕಗಳನ್ನು ಮಾತ್ರ ಸರ್ಕಾರದ ಆದೇಶದ ಮಾರ್ಗಸೂಚಿಗಳನ್ವಯ ನಮೂದಿಸಲು ಸಂಬಂಧಪಟ್ಟ ತಾಲ್ಲೂಕು ಅಧಿಕಾರಿಯವರಿಗೆ ನಿರ್ದೇಶನ ನೀಡತಕ್ಕದ್ದು. ಹೆಚ್ಚುವರಿ ಶುಲ್ಕಗಳನ್ನು ಪಾವತಿಸತಕ್ಕದ್ದಲ್ಲ.
4. ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ನೀಡಬೇಕಾದ ಶುಲ್ಕಗಳನ್ನು, ಸರ್ಕಾರದ ನಿಗಧಿಪಡಿಸುವ ಅರ್ಹ ಮೊತ್ತವನ್ನು ಮಾತ್ರ ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರ ಬ್ಯಾಂಕ್ ಖಾತೆಗೆ ಮಾತ್ರ ಪಾವತಿಸತಕ್ಕದ್ದು.
5. ವಿದ್ಯಾರ್ಥಿಯಿಂದ ಶುಲ್ಕಗಳು ಮತ್ತು ಇತರೆ ಮೊತ್ತವನ್ನು ಸಂಬಂಧಿಸಿದ ವಿದ್ಯಾಸಂಸ್ಥೆ ರವರು ಪಡೆದಿದ್ದಲ್ಲಿ, ವಿದ್ಯಾರ್ಥಿಗಳ ವಿವರಗಳನ್ನು ಸಂಬಂಧಿಸಿದ ವಿದ್ಯಾಸಂಸ್ಥೆಯಿಂದ ಪಡೆದು, ಅಂತಹ ಮೊತ್ತವನ್ನು ವಿದ್ಯಾಸಂಸ್ಥೆಗೆ ಪಾವತಿಸದೇ ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ DBT ಮೂಲಕ ಜಮೆ ಮಾಡತಕ್ಕದ್ದು.
6. ವಿದ್ಯಾರ್ಥಿನಿಲಯ ನಿರ್ವಹಣೆಗೆ ಹಾಸ್ಟಲ್ ಸ್ಕಾಲರ್‌ನ್ನು ಸಂಬಂಧಿಸಿದ ತಾಲ್ಲೂಕಿನ ಸಹಾಯಕ ನಿರ್ದೇಶಕರು ಗ್ರೇಡ್-1 ಮತ್ತು ಗ್ರೇಡ್-2, ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಹಾಗೂ ವಾರ್ಡನ್ ರವರ ಹೆಸರಿನಲ್ಲಿ ತೆರೆದಿರುವ ಬ್ಯಾಂಕ್ ಖಾತೆ ಸಂಖ್ಯೆಗೆ DBT ಮೂಲಕ ಮಾತ್ರ ಜಮೆ ಮಾಡತಕ್ಕದ್ದು.

--3

7. ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾತಿಯಾಗಿರುವ ಹಾಸ್ಟಲ್ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ ಸಂಧಿಸಿದಂತೆ ನಿಲಯಾರ್ಥಿಗಳ ಪಟ್ಟಿಯನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳು ಸಿದ್ದಪಡಿಸಿಕೊಂಡು ದೃಢೀಕರಿಸಿಕೊಂಡ ನಂತರ ವಿದ್ಯಾರ್ಥಿವೇತನ ಮಂಜೂರಾತಿ ನೀಡತಕ್ಕದ್ದು.
8. Day Scholar/Hostel ವಿದ್ಯಾರ್ಥಿಗಳ ಕಾಲೇಜು ಶುಲ್ಕವನ್ನು ಸಂಬಂಧಪಟ್ಟ ವಿದ್ಯಾರ್ಥಿಯು ಈಗಾಗಲೇ ಕಾಲೇಜು/ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು/ಮುಖ್ಯಸ್ಥರಿಗೆ ಪಾವತಿಸಿದ್ದಲ್ಲಿ, ನೇರವಾಗಿ ವಿದ್ಯಾರ್ಥಿಯ Bank Account ಗೆ DBT ಮೂಲಕ ಜಮೆ ಮಾಡತಕ್ಕದ್ದು.
9. Day Scholar ವಿದ್ಯಾರ್ಥಿಗಳಿಗೆ ಪಾವತಿಸಬೇಕಾದ ವಿದ್ಯಾರ್ಥಿವೇತನವನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ DBT ಮೂಲಕ ಜಮೆ ಮಾಡತಕ್ಕದ್ದು.
10. ಸಂಬಂಧಿಸಿದ ಕಾಲೇಜುಗಳ ಶುಲ್ಕಗಳನ್ನು ಪಾವತಿ ಮಾಡುವಾಗ ಶುಲ್ಕವನ್ನು ಸರ್ಕಾರ ನಿಗಧಿಪಡಿಸಿರುವಂತೆ ಪರಿಶೀಲಿಸಿಕೊಂಡ ನಂತರ ಪಾವತಿಸಲು ಕ್ರಮ ವಹಿಸತಕ್ಕದ್ದು. (ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು)
11. NSP ಕಾರ್ಯಕ್ರಮದಡಿ ಅರ್ಜಿಸಲ್ಲಿಸಿದ ಬಾಕಿ ಇರುವ ವಿದ್ಯಾರ್ಥಿಗಳ ಅರ್ಜಿಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಪರಿಶೀಲಿಸಿದ ನಂತರ ತಾಲ್ಲೂಕು ಮಟ್ಟದ ಅಧಿಕಾರಿಗಳು ನಮೂದಿಸಿರುವ ಶುಲ್ಕಗಳು, ನಿರ್ವಹಣಾ ಶುಲ್ಕಗಳನ್ನು ಸರ್ಕಾರವು ನಿಗಧಿಪಡಿಸಿರುವ ಶುಲ್ಕದ ದರಗಳಂತೆ ಮಾತ್ರವೇ ಪಾವತಿಸತಕ್ಕದ್ದು,
12. ಲೆಕ್ಕಶೀರ್ಷಿಕೆ:2225-00-102-0-31ರಡಿ ಹಾಗೂ ಲೆಕ್ಕಶೀರ್ಷಿಕೆ:2225-00-102-0-07ರಡಿ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಭರಿಸಬೇಕಾದ್ದಲ್ಲಿ, ಸಂಬಂಧಿಸಿದ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಮೇಲು ರುಜು ಪಡೆದು ನಂತರ ವಿದ್ಯಾರ್ಥಿವೇತನದ ಬಿಲ್ಲನ್ನು ಖಜಾನೆಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಲ್ಲಿಸತಕ್ಕದ್ದು.
13. ಕಾಲೇಜು, ಜಿಲ್ಲಾ ಮತ್ತು ರಾಜ್ಯಮಟ್ಟದ ಲಾಗಿನ್‌ನಲ್ಲಿ ಬಾಕಿ ಇರುವ ಅರ್ಜಿಗಳಿಗೆ ವಿದ್ಯಾರ್ಥಿವೇತನ ಮಂಜೂರಾತಿಯಲ್ಲಿ ವ್ಯತ್ಯಾಸವಾದಲ್ಲಿ ಸಂಬಂಧಿಸಿದ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳೇ ನೇರ ಹೊಣೆಗಾರರಾಗತಕ್ಕದ್ದು.
14. Regulation of Governing the Award of Scholarship (Applicable from 01.07.2010 ರನ್ವಯ ವಿದ್ಯಾರ್ಥಿವೇತನ ಹಾಗೂ ಶುಲ್ಕಗಳನ್ನು ಪಾವತಿಸತಕ್ಕದ್ದು.
15. Day Scholar/ Hostel ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಮಂಜೂರು ಮಾಡಲಾದ ಶುಲ್ಕದ ವಿವರಗಳನ್ನು Excel Format ನಲ್ಲಿ ಜಿಲ್ಲಾವಾರು ತಯಾರಿಸಿ ನಿರ್ದೇಶಕರ ಕಛೇರಿಯ ಇ-ಮೇಲ್ **nspdirectorst@gmail.com** ಜಿಲ್ಲಾ ಮಟ್ಟದ ಅಧಿಕಾರಿಗಳು ದೃಢೀಕರಿಸಿ ಕಳುಹಿಸತಕ್ಕದ್ದು .

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ದಿನಾಂಕ:18.01.2020ರನ್ವಯ ಸರ್ಕಾರದ ಆದೇಶ ಸಂಖ್ಯೆ: ಆಇ 1 ಟಿ ಎಫ್ ಪಿ 2020 ದಿನಾಂಕ:13.01.2020ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಜಶ್ರೀ ಹೆಚ್ ಕುಲಕರ್ಣಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು
3. ಎಲ್ಲಾ ಜಿಲ್ಲೆಯ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
4. ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು.
5. ಎಲ್ಲಾ ತಾಲ್ಲೂಕು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಗ್ರೇಡ್-1, ಗ್ರೇಡ್-2.
6. ಎಲ್ಲಾ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

**ಪ್ರತಿಗಳು:**

1. ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿ-2, ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ.

******